ಗುರ್ತಿಸಿಕೊಳ್ಳುತ್ತಾರೆ ಎಂದರೆ ಆ ಪಾತ್ರದಲ್ಲಿ ಅಂಥ ವಿಶೇಷವಾದದ್ದೇನೋ ಇದೆಯಲ್ಲ. ಸಂಖ್ಯೆ ಚಿಕ್ಕದಾದರೂ, ಅಂಥ ಪಾತ್ರಗಳ ಮೂಲಕವೇ ನಾನು ಗುರ್ತಿಸಿಕೊಳ್ಳಲು ಇಷ್ಟಪಡುತ್ತೇನೆ. ನನ್ನ ಇದುವರೆಗಿನ ಸಿನಿಮಾ ಜರ್ನಿ ಬಗ್ಗೆ ನನಗೆ ಹೆಮ್ಮೆಯಿದೆ. ಈ ದಾರಿಯಲ್ಲಿ ನನ್ನ ಸಾಧನೆ ದೊಡ್ಡದೋ, ಚಿಕ್ಕದೋ, ಅದು ನನ್ನದೇ ಆಗಿದೆ ಎಂಬ ತೃಪ್ತಿ ಇದೆ' ಎನ್ನುತ್ತಾರೆ ಅವರು.

ಒಂದು ಸಿನಿಮಾ ಒಪ್ಪಿಕೊಳ್ಳುವಾಗ ಭಾವನಾ ಮೊದಲು ಗಮನಹರಿಸುವುದು ತಮ್ಮ ಪಾತ್ರದ ಬಗ್ಗೆ. 'ನನಗೆ ಪಾತ್ರ ತುಂಬಾನೇ ಮುಖ್ಯ. ಸಿನಿಮಾದಲ್ಲಿ ಅದಕ್ಕೊಂದು ಭಾವನಾತ್ಮಕ ಜರ್ನಿ ಇರಬೇಕು. ಪಾತ್ರ ಒಪ್ಪಿಗೆಯಾದ ನಂತರ ನಿರ್ದೇಶಕರು, ನಿರ್ಮಾಣ ಸಂಸ್ಥೆ ಎಲ್ಲವನ್ನೂ ಗಮನಿಸುತ್ತೇನೆ' ಎನ್ನುವ ಅವರಿಗೆ ಖುಷಿ ಕೊಡುವ ಪಾತ್ರಗಳಲ್ಲಿ ನಟಿಸುವ ಅವಕಾಶಗಳಂತೂ ಬರುತ್ತಲೇ ಇವೆ.

'ಹೊಂದಿಸಿ ಬರೆಯಿರಿ', 'ಗ್ರೇ ಗೇಮ್ಸ್' ಸಿನಿಮಾಗಳಲ್ಲಿಯೂ ಅವರಿಗೆ ಖುಷಿ ಕೊಡುವ ಪಾತ್ರಗಳೇ ಸಿಕ್ಕಿವೆ.

ನಟನೆ ಮತ್ತು ಜನರ ಜೊತೆಗಿನ ಒಡನಾಟವು ತನ್ನ ವ್ಯಕ್ತಿತ್ವವನ್ನು ರೂಪಿಸಿವೆ ಎನ್ನುತ್ತಾರೆ ಅವರು. 'ಮೊದಲಿಗೆ ಹೋಲಿಸಿದರೆ, ಈಗ ನನ್ನ ಆಲೋಚನೆ, ನಡತೆ ಎಲ್ಲವೂ ಪ್ರಬುದ್ಧವಾಗಿವೆ. ಪಾತ್ರಗಳು, ಚಿತ್ರತಂಡದ ಜೊತೆಗಿನ ಒಡನಾಟದಿಂದ ನಾನು ಸಾಕಷ್ಟು ಕಲಿತಿದ್ದೀನಿ. 'ಗಾಳಿಪಟ' ಮಾಡಿದಾಗ ನಾನೊಬ್ಬಳು ರೆಸ್ಟ್‌ಲೆಸ್, ದುಡುಕು ಹುಡುಗಿಯಾಗಿದ್ದೆ. ಈಗ ತುಂಬ ಸಂಯಮ ಬಂದಿದೆ. 'ಹೊಂದಿಸಿ ಬರೆಯಿರಿ' ಸಿನಿಮಾದ ಭೂಮಿಕಾ ಪಾತ್ರದಿಂದ, 'ಗ್ರೇ ಗೇಮ್'ನಲ್ಲಿ ಸೈಬರ್ ಪೊಲೀಸ್ ಅಧಿಕಾರಿ ಪಾತ್ರದಿಂದ ನಾನು ಸಾಕಷ್ಟು ಪ್ರಭಾವಿತಳಾಗಿದ್ದೇನೆ. ಪಾತ್ರಗಳಷ್ಟೇ, ತಂಡದ ಸದಸ್ಯರೂ ನನ್ನ ವ್ಯಕ್ತಿತ್ವದ ಮೇಲೆ ಪ್ರಭಾವ ಬೀರಿದ್ದಾರೆ'' ಎನ್ನುತ್ತಾರೆ ಅವರು.

ಎಲ್ಲ ರೀತಿಯ ಪಾತ್ರಗಳಲ್ಲಿಯೂ ನಟಿಸಬೇಕು ಎನ್ನುವ ಭಾವನಾಗೆ, ಪೌರಾಣಿಕ ಪಾತ್ರಗಳು ಮತ್ತು ಸ್ಫೂರ್ತಿದಾಯಕ ವ್ಯಕ್ತಿಗಳ ಜೀವನ ಆಧಾರಿತ ಪಾತ್ರಗಳಲ್ಲಿ ನಟಿಸಬೇಕು ಎಂಬ ಆಸೆಯಿದೆ. 'ಸುಧಾ ಮೂರ್ತಿ ಅವರ ಜೀವನ ನನ್ನನ್ನು ತುಂಬ ಪ್ರಭಾವಿಸಿದೆ. ಯಾರಾದರೂ ಅವರ ಬದುಕಿನ ಕುರಿತು ಸಿನಿಮಾ ಮಾಡುವುದಾದರೆ ನನ್ನನ್ನೇ ಆ ಪಾತ್ರಕ್ಕೆ ಆಯ್ದುಕೊಳ್ಳಲಿ ಎಂದು ಮನಸಾ ಆಶಿಸುತ್ತೇನೆ' ಎಂದು ನಗುತ್ತಾರೆ ಭಾವನಾ.

ಸದ್ಯ ಇನ್ನೂ ಎರಡು ಪ್ರಾಜೆಕ್ಟ್‌ಗಳ ಮಾತುಕತೆಯಲ್ಲಿರುವ ಭಾವನಾಗೆ ಇತ್ತೀಚೆಗೆ ಸಿನಿಮಾ ನಿರ್ಮಾಣದಲ್ಲಿಯೂ ಆಸಕ್ತಿ ಹುಟ್ಟಿದೆಯಂತೆ. ಹಾಗಾಗಿ ಇದುವರೆಗಿನ ನಟಿ ಭಾವನಾ ಸದ್ಯದಲ್ಲಿಯೇ ನಿರ್ಮಾಪಕಿ ಭಾವನಾ ಆಗುವ ಸುಳಿವೂ ಇದೆ. ■

# ಉಪ್ಪಿ ನಾಮ!




ಉಪೇಂದ್ರ ಅವರಿಗೆ ಅಕ್ಷರಗಳಿಗಿಂತ ಚಿಹ್ನೆ–ಸನ್ನೆಗಳ ಮೇಲೇ ಹೆಚ್ಚು ನಂಬಿಕೆ ಬಂದಿರುವಂತಿದೆ. ತಮ್ಮ ನಿರ್ದೇಶನದ ಹಿಂದಿನ ಸಿನಿಮಾ 'ಸೂಪರ್' ಅನ್ನೂ ಅವರು ಆ ಸನ್ನೆಯ ಮೂಲಕವೇ ವ್ಯಕ್ತಗೊಳಿಸಿದ್ದರು. ಈಗ ಅವರ ನಿರ್ದೇಶನದ ಹೊಸ ಸಿನಿಮಾದಲ್ಲಿ ಉದ್ದುದ್ದ ನಾಮ ಎಳೆದಿದ್ದಾರೆ. 'ಯು ಆ್ಯಂಡ್ ಐ' ಎಂದೆಲ್ಲ ವ್ಯಾಖ್ಯಾನಿತಗೊಳ್ಳುತ್ತಿರುವ ಈ ಚಿಹ್ನೆ ತಿರುಪತಿ ನಾಮವನ್ನು ಹೋಲುತ್ತಿರುವುದಂತೂ ಸುಳ್ಳಲ್ಲ. ಇದಕ್ಕೆ ಪೂರಕವಾಗಿ ಮುಹೂರ್ತದ ದಿನ ಸ್ವತಃ ಉಪೇಂದ್ರ ಹಣೆಯ ಮೇಲೆ ನಾಮ ಎಳೆದುಕೊಂಡಿರುವುದಲ್ಲದೇ, ನಿರ್ಮಾಪಕರಾದ ಜಿ. ಮನೋರಂಜನ್ ಮತ್ತು ಶ್ರೀಕಾಂತ್ ಕೆ.ಪಿ. ಅವರಿಗೂ ನಾಮ ಇಟ್ಟಿದ್ದರು!

ಆದರೆ ಅದರ ಅರ್ಥ ಅಷ್ಟೇ ಅಲ್ಲ ಎನ್ನುವುದನ್ನು ಚಿತ್ರದ ಪೋಸ್ಟರ್ ಸಾರಿ ಹೇಳುತ್ತಿದೆ. ಕುದುರೆ ಮುಖದ ಚಿತ್ರವನ್ನು ಇಟ್ಟುಕೊಂಡು ವಿನ್ಯಾಸ ಮಾಡಲಾಗಿರುವ ಈ ಪೋಸ್ಟರ್‌ನಲ್ಲಿ ಮೂಗುದಾರದ ರೂಪದಲ್ಲಿ ಯು ಚಿಹ್ನೆ ಮತ್ತು ಮೂಗಿನ ಮೇಲೆ ಹನಿಯುತ್ತಿರುವ ರಕ್ತದ ರೂಪದಲ್ಲಿ ಐ ಚಿಹ್ನೆಯನ್ನು ಇಡಲಾಗಿದೆ. ಇದರ ಜೊತೆಗೆ 'ಬುದ್ಧಿಯ ಬಿರುಗಾಳಿ' ಎಂಬ ಸಾಲೂ ಇದೆ. ಇದರ ಅರ್ಥ ಏನು ಎಂದು ಈಗಾಗಲೇ ಅವರ ಅಭಿಮಾನಿಗಳು ತಲೆಕೆಡಿಸಿಕೊಳ್ಳಲು ಆರಂಭಿಸಿಯಾಗಿದೆ. ಟೈಟಲ್ ಮೂಲಕವೇ ಅಭಿಮಾನಿಗಳ ಮೆದುಳಿಗೆ ಹುಳ ಬಿಡುವ ಉಪ್ಪಿ ಸ್ಟೈಲ್ ಇಲ್ಲಿ ವರ್ಕೌಟ್ ಆಗಿದೆ. ಹಲವು ವರ್ಷಗಳ ನಂತರ ಅವರು ನಿರ್ದೇಶನಕ್ಕಿಳಿದಿರುವುದು ಸಾಕಷ್ಟು ನಿರೀಕ್ಷೆಯನ್ನೂ ಹುಟ್ಟುಹಾಕಿದೆ. ಈ ನಾಮದ ಬಲ ಅವರ ಹೆಸರಿನಲ್ಲಿ ಮತ್ತೊಂದು ಯಶಸ್ವಿನ ದಾಖಲೆಯನ್ನು ಬರೆಯಬಹುದೇ ಎಂಬ ಪ್ರಶ್ನೆಗೆ ಉತ್ತರ ಸಿಗಲು ಇನ್ನೂ ಕೆಲ ಕಾಲ ಕಾಯಬೇಕಿದೆ. ■

# ಜಗ್ಗೇಶ್ ಹಬ್ಬದೂಟ!




ಜಗ್ಗೇಶ್ ಖುಷಿಯಾಗಿದ್ದಾರೆ. ಖುಷಿಗೆ ಒಂದಲ್ಲ, ಹಲವು ಕಾರಣಗಳಿವೆ. ರಾಜಕೀಯ ಜೀವನದಲ್ಲಿ ಅವರಿಗೆ ಟಿಕೆಟ್ ಭಾಗ್ಯ ಸಿಕ್ಕಿದೆ; ಹಾಗಾಯೆ ಚಿತ್ರಮಂದಿರಗಳಲ್ಲಿ ಅವರ ಅಭಿಮಾನಿಗಳಿಗೂ ಟಿಕೆಟ್ ಪಡೆದು ಜಗ್ಗೇಶ್ ಹಾಸ್ಯವನ್ನು ಸವಿಯುವ ಅವಕಾಶ ಸಿಗುತ್ತಿದೆ. ಅವರ ಅಭಿನಯದ 'ತೋತಾಪುರಿ' ಹುಳಿಯ ಜೊತೆಗೆ ಮತ್ತೊಂದು ಮೃಷ್ಟಾನ್ನ ಭೋಜನ ಉಣಿಸಲು ಜಗ್ಗೇಶ್ ಸಜ್ಜಾಗಿದ್ದಾರೆ.

ಸಂತೋಷ್ ಆನಂದ್‌ರಾಮ್ ನಿರ್ದೇಶನದ ಜಗ್ಗೇಶ್ ಅಭಿನಯದ 'ರಾಘವೇಂದ್ರ ಸ್ಟೋರ್' ಸಿನಿಮಾದ ಬಿಡುಗಡೆಯ ದಿನಾಂಕವನ್ನು ಹೊಂಬಾಳೆ ಫಿಲ್ಮ್ಸ್ ಇತ್ತೀಚೆಗೆ ಘೋಷಿಸಿದೆ. ಆಗಸ್ಟ್ 5 ರಂದು, ವರಮಹಾಲಕ್ಷ್ಮಿ ಹಬ್ಬದ ದಿನವೇ ಹಬ್ಬದೂಟ ಉಣಿಸುವ ಸಿದ್ಧತೆಯನ್ನು ಮಾಡಿಕೊಳ್ಳಲಾಗಿದೆ.

ಈ ಚಿತ್ರದಲ್ಲಿ ಜಗ್ಗೇಶ್ ಅಡುಗೆ ಭಟ್ಟನ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಈಗಾಗಲೇ ಬಿಡುಗಡೆಯಾಗಿರುವ ಟೀಸರ್, ಜಗ್ಗೇಶ್ ಅಭಿಮಾನಿಗಳಲ್ಲಿ ಕುತೂಹಲದ ಒಗ್ಗರಣೆ ಹಾಕಿದ್ದು, ಫುಲ್ ಮೀಲ್ಸ್‌ಗಾಗಿ ಆಗಸ್ಟ್ ಮೊದಲ ವಾರಕ್ಕಾಗಿ ಕಾಯುತ್ತಿದ್ದಾರೆ. ■